**೬. ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತ ಯಾವುದೇ ವ್ಯವಸ್ಥೆಯ ವಿವರ: ಕಲಂ ೪ (೧) (ಬಿ) (VII)**

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರುಗಳನ್ನು ಸನ್ಮಾನಿಸಿ, ಗೌರವಿಸಿ ಸಾರ್ವಜನಿಕರೊಡನೆ ನೇರವಾಗಿ ಸಮಾಲೋಚಿಸುವ ವಿನೂತನ ಕಾರ್ಯಕ್ರಮವಾದ "ಧ್ರುವತಾರೆ" ಕಾರ್ಯಕ್ರಮವವನ್ನು ಹಮ್ಮಿಕೊಂಡಿದ್ದು, ಕಾರ್ಯಕ್ರಮದ "ಧ್ರುವತಾರೆ" ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗವಹಿಸಿ, ಮುಕ್ತವಾಗಿ ಸಮಾಲೋಚಿಸಲು ಅವಕಾಶವಿರುತ್ತದೆ. ಸಾಧಕರು ಮತ್ತು ಸಾರ್ವಜನಿಕರ ನಡುವೆ ಸುವರ್ಣ ಸೇತುವೆಯಾಗುವ ಈ ಕಾರ್ಯಕ್ರಮದಲ್ಲಿ ಮೊದಲ ಅತಿಥಿಯಾಗಿ ಖ್ಯಾತ ಚಲನಚಿತ್ರ ಕಲಾವಿದರಾದ ಶ್ರೀ ರಮೇಶ್ ಅರವಿಂದ್ ಅವರು ದಿನಾಂಕ: ೧೯-೦೮-೨೦೨೩ರಂದು ಭಾಗವಹಿಸಿದ್ದರು. ನಂತರ ದಿನಾಂಕ: ೨೩-೦೯-೨೦೨೩ರಂದು ಶ್ರೀ ಕ್ಯಾಪ್ಟನ್ ಗೋಪಿನಾಥ್, ದಿನಾಂಕ: ೨೭-೧೦-೨೦೨೩ರಂದು ಸಾಹಿತಿಗಳಾದ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು, ದಿನಾಂಕ: ೧೬-೧೨-೨೦೨೩ರಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಶಂಕರ ಬಿದರಿಯವರು ಭಾಗವಹಿಸಿದ್ದರು.

**ದತ್ತಿನಿಧಿ ಯೋಜನೆ:** ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ಸ್ಮರಣೆಗೆ ಅಥವಾ ನಾಡು-ನುಡಿಗಳ ಬಗ್ಗೆ ವಿಶೇಷ ಅಭಿಮಾನದಿಂದ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ಆಶಯದಂತೆ ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು, ಶಾಶ್ವತ ಠೇವಣಿಯನ್ನು ಇಟ್ಟು, ಅದರಿಂದ ಬರುವ ಬಡ್ಡಿಯನ್ನು ಕಾರ್ಯಕ್ರಮಕ್ಕೆ ಬಳಸುವಂತೆ ಒಪ್ಪಿಗೆಯನ್ನು ಸೂಚಿಸಿ, ಅನೇಕ ಅಭಿಮಾನಿಗಳು, ಸಂಸ್ಥೆಗಳು, ಸಂಘಟನೆಗಳು, ಗಡಿನಾಡು, ಹೊರರಾಜ್ಯ ಹಾಗೂ ವಿದೇಶಗಳಲ್ಲಿ ವಾಸಿಸಿರುವ ಕನ್ನಡಿಗರು, ಈ ಕೈಂಕರ್ಯದಲ್ಲಿ ಪಾಲ್ಗೊಂಡು ಅಭಿಮಾನ ಮೆರೆದಿದ್ದಾರೆ.

ಪ್ರಸ್ತುತ ಸಾಹಿತ್ಯ ಪರಿಷತ್ತಿನಲ್ಲಿ ಒಟ್ಟು ೨೧೪೩ (ಎರಡು ಸಾವಿರದ ನಲವತ್ತೂರು) ದತ್ತಿನಿಧಿಗಳು ಇರುತ್ತವೆ. ಅಲ್ಲದೇ ದತ್ತಿ ನಿಧಿಗಳನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗುತ್ತದೆ. ಜಿಲ್ಲಾ ಅಧ್ಯಕ್ಷರು ದಾನಿಗಳ ಆಶಯದಂತೆ ಕಾರ್ಯಕ್ರಮಗಳನ್ನು ಏರ್ಪಡಿಸಿ, ಕೇಂದ್ರ ಪರಿಷತ್ತಿಗೆ ಮಾಹಿತಿ ನೀಡುತ್ತಾರೆ. ಅಲ್ಲದೇ ತಾಲ್ಲೂಕು ಮಟ್ಟದಲ್ಲಿಯೂ ಸಹ ದತ್ತಿನಿಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರ ವರದಿಯನ್ನು ಜಿಲ್ಲಾಧ್ಯಕ್ಷರಿಗೆ ನೀಡಲಾಗುತ್ತದೆ.

೧೯೩೫ನೇ ಇಸವಿಯಲ್ಲಿ ಆಚಾರ್ಯ ಶ್ರೀ ಬಿ.ಎಂ.ಶ್ರೀಕಂಠಯ್ಯರವರು ಗಮಕ ಕಲೆಯ ಪ್ರೋತ್ಸಾಹಕ್ಕಾಗಿ ರೂ. ೧,೦೦೦/- (ಒಂದು ಸಾವಿರ ರೂಪಾಯಿ) ಗಳ ನಿಧಿಯನ್ನು ಸ್ಥಾಪಿಸಿದ್ದು ಇದು ಪರಿಷತ್ತಿನ ಮೊಟ್ಟಮೊದಲ ದತ್ತಿನಿಧಿಯಾಗಿದೆ.

ರಾಷ್ಟ್ರೀಯ ಹಬ್ಬಗಳು, ಕನ್ನಡ ರಾಜ್ಯೋತ್ಸವ ಹಾಗೂ ಇತರ ವಿಶೇಷ ಕಾರ್ಯಕ್ರಮಗಳ ಆಯೋಜನೆ, ಸಾಹಿತಿಗಳ ಜನ್ಮ ದಿನಾಚರಣೆ, ಜಯಂತಿ ಆಚರಣೆ ಇಂತಹ ಸಂದರ್ಭಗಳಲ್ಲಿ ಗಣ್ಯ ವ್ಯಕ್ತಿಗಳು ಹಾಗು ಸಂಘಟನೆಗಳ ಅಭಿಪ್ರಾಯ ಸೂಕ್ತವೆಂದು ಕಂಡುಬಂದಲ್ಲಿ ಪರಿಶೀಲಿಸಲಾಗುತ್ತದೆ.